ತೊಂದರೆ ಮಾಡುತ್ತಿದ್ದಾರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಬೆಳೆಯನ್ನು ನಾಶಮಾಡುತ್ತಿದ್ದಾರೆ. ಅದಕ್ಕಾಗಿ ಅವು ತಾಳಿರುವ ಈ ನಿಲುವನ್ನು ಅವರ ಧೋರಣೆಯನ್ನು ನೋಡಿಕೊಂಡು ಜನ ಇವೊತ್ತು ಬೇಸತ್ತಿದ್ದಾರೆ. ಇದರಿಂದ ರಾಜ್ಯದ, ದೇಶದ ಪ್ರೊಡಕ್ಟಿವಿಟಿ, ಉತ್ಪಾದನೆ ಏನು ಇದೆ ಅದು ಕುಂಠಿತವಾಗಿದೆ. ಅದಕ್ಕೂ ಕೂಡ ಜವಾಬ್ದಾರಿಯನ್ನು ಇವರು ಹೊತ್ತುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾವು ಅವರು ಮಾಡುತ್ತಿರುವ ಧೋರಣೆ ಹಾಗೂ ಕೃತಿಯ ವಿರುದ್ಧ ನಾವೆಲ್ಲರೂ ಕೂಡ ಪಕ್ಷದ ವತಿಯಿಂದ ಪ್ರತಿಭಟನೆಯನ್ನು ಮಾಡಿ ವಾಕೌಟ್ ಮಾಡುತ್ತೇವೆ. ಈಗ ಚುನಾವಣೆ ಹಿನ್ನೆಲೆ ನೋಡಿಕೊಂಡು ಈಗಲಾದರೂ ಅವರಿಗೆ ಬುದ್ಧಿ ಬಂದು ಅವರ ಧೋರಣೆಯನ್ನು ಸುಧಾರಣೆ ಮಾಡಿಕೊಳ್ಳತಕ್ಕಂಥದ್ದು ಸರಿ ರೈತರಿಗೆ ಕನ್ಸಿಷನ್ ಕೊಡತಕ್ಕಂಥದ್ದು ಮಾಡುತ್ತಾರೆ ಎಂದು ಹೇಳಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಾವು ಎಷ್ಟೇ ಕೇಳಿಕೊಂಡರೂ ಅವರಿಗೆ ಚಿಂತೆ ಇಲ್ಲ. ಈ ಪ್ರಸ್ತಾವನೆಯನ್ನು ನಾವು ಇಂದು ಒಂದೇ ಧ್ವನಿಯಿಂದ ಅಂದರೆ ನಮ್ಮ ಪಕ್ಷದವರು, ಬಿ.ಜೆ.ಪಿ.ಯವರು, ವಾಟಾಳ್ ನಾಗರಾಜ್‌ರವರು ಇನ್ನು ಅನೇಕರು ಒಂದೇ ಧ್ವನಿಯಿಂದ ಪ್ರಸ್ತಾವನೆಯನ್ನು ಮಂಡಿಸಿದರೂ ಕೂಡ ಮಾನ್ಯ ಮಂತ್ರಿಗಳು ಯಾವುದೇ ರೀತಿಯಾದ ಸರಿಯಾದ ಉತ್ತರವನ್ನು ಕೊಡದೆ ಅಲಕ್ಷ್ಯ ಮಾಡಿದ್ದಾರೆ. ಇನ್ನು ಮಾನ್ಯ ಮುಖ್ಯಮಂತ್ರಿಗಳಿಗಂತೂ ಅದರ ಚಿಂತನೆ ಇಲ್ಲ ಬಿಡಿ. ಅವರು ಬರೀ ತನ್ನ ಕುರ್ಚಿ ಹೇಗೆ ಉಳಿಯುತ್ತದೆ ಎನ್ನುವ ಚಿಂತನೆಯಲ್ಲೇ ಮೂರನೇ ಮಹಡಿಯಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲ ಎಂದರೆ ಕಾವೇರಿಯಲ್ಲಿ ಕುಳಿತುಕೊಳ್ಳುತ್ತಾರೆ. ಅವರ ಗಮನ ಬೇರೆ ಎಲ್ಲೂ ಕೂಡ ಇಲ್ಲ. ಅದಕ್ಕೆ ಈ ಪರಿಸ್ಥಿತಿ ಉಂಟಾಗಿದೆ. ಇದನ್ನು ನಾವು ಪ್ರೊಟೆಸ್ಟ್ ಮಾಡಿ ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೇ, ಬೇರೆಯಾದಂತಹ ಕಾರಣಕ್ಕೋಸ್ಕರ ಒಂದು ಸತ್‌ಸಂಪ್ರದಾಯ ಇಲ್ಲಿ ಪ್ರಾರಂಭ ಮಾಡಬೇಕಂದು ಹೇಳಿ ನಾವು ವೆಲ್‌ನಲ್ಲಿ ಕುಳಿತುಕೊಳ್ಳುವುದನ್ನು ನಿಲ್ಲಿಸಿದ್ದೇವೆ. ಏಕೆಂದರೆ ಇದರಿಂದ ಒಳ್ಳೆಯದಾಗುವುದಿಲ್ಲವೆಂದು. ಇಲ್ಲದೇ ಇದ್ದರೆ ಇದು ಯಾವ ರೀತಿಯ ಇಶ್ಯೂ ಇದೆ ಎಂದರೆ ಈ ರಾಜ್ಯದ 12 ಲಕ್ಷ ರೈತರ ಕುಟುಂಬಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ತಾವು ಮೀಟರ್ ಹಾಕುವುದಿಲ್ಲವೆಂದು ಹೇಳುವವರೆಗೂ ಧರಣಿ ಮಾಡಿ, ಸತ್ಯಾಗ್ರಹ ಮಾಡಿ ಸದನದ ಕಾರ್ಯಕಲಾಪ ಸ್ಥಗಿತಗೊಳಿಸಬೇಕಾದಂತಹ ವಿಷಯ. ಆದರೆ ಎಲ್ಲಾದಕ್ಕೂ ವೆಲ್‌ನಲ್ಲಿ ಹೋಗಬೇಕೆಂದು ಇಲ್ಲ. ಅದಕ್ಕಾಗಿ ಸದನದ ಕಾರ್ಯಕಲಾಪ ಮುಂದೆ ಹೋಯಿತು ಎಂದು ಪತ್ರಿಕೆಯ ಮುಖಪುಟದಲ್ಲಿ ಬಂದು ಅದರಿಂದ ಪ್ರಚಾರ ತೆಗದುಕೊಳ್ಳುವಂತಹ ಅಗತ್ಯವೂ ಇಲ್ಲ. ನಾನು ಒಂದು ಮಾತು ಹೇಳುತ್ತೇನೆ, ಇವತ್ತು ಸ್ಪಷ್ಟವಾಗಿ ಎದ್ದು